**"ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರೂ ಇಡಿಯಾಗಿ ಇಂಗ್ಲಿಷ್ ಸಾಹಿತ್ಯ ಚರಿತ್ರೆಯನ್ನು ಮೊಟ್ಟ ಮೊದಲು ಕನ್ನಡದಲ್ಲಿ ರಚಿಸಿದ ಲೇಖಕರು ಎಲ್.ಎಸ್.ಎಸ್. ಈ ಕೃತಿಗೆ ಪೂರಕವಾಗಿ, ಇಂಗ್ಲಿಷ್‌ನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನೂ (A History of Kannada Literature) ಬರೆದರು...**

'ಬಹುಮುಖಿ ಪಾಂಡಿತ್ಯ' ಎಂಬ ಪದಪುಂಜ ಕ್ಲೀಷೆಯಾದರೂ ಕನ್ನಡ ನವೋದಯ ಲೇಖಕರ ಬಗ್ಗೆ ಹಾಗೂ ಎಲ್.ಎಸ್.ಎಸ್. ಬಗ್ಗೆ ಆ ಪದಪುಂಜವನ್ನು ಉಪಯೋಗಿಸಲೇಬೇಕು. ಅವರು ವೃತ್ತಿಯಲ್ಲಿ ಇಂಗ್ಲಿಷ್ ಭಾಷೆ–ಸಾಹಿತ್ಯಗಳ ಪ್ರಾಧ್ಯಾಪಕರು; ಲೇಖಕರಾಗಿ, ಕಥೆಗಾರರು (ನಾಲ್ಕು ಸಂಕಲನಗಳು), ನಾಟಕಕಾರರು (ನಾಲ್ಕು ನಾಟಕಗಳು), ವಿಮರ್ಶಕರು (ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ: 22 ಗ್ರಂಥಗಳು), ಮಹಾಭಾರತದ ಮರು ಕಥನಕಾರರು (ನಾಲ್ಕು ಸಂಪುಟಗಳು, ಇವುಗಳ ಇಂಗ್ಲಿಷ್ ಅನುವಾದವನ್ನು ಎರಡು ಸಂಪುಟಗಳಲ್ಲಿ ಜಿ.ಎನ್. ರಂಗನಾಥ ರಾವ್ ಪ್ರಕಟಿಸಿದ್ದಾರೆ), ನಿಘಂಟುಕಾರರು (ಇಂಗ್ಲಿಷ್–ಕನ್ನಡ, ಕನ್ನಡ–ಕನ್ನಡ–ಇಂಗ್ಲಿಷ್: ಒಟ್ಟು ಆರು ನಿಘಂಟುಗಳು), ಅನುವಾದಕರು (ನಾಲ್ಕು ಕೃತಿಗಳು), ಮಕ್ಕಳ ಸಾಹಿತ್ಯವನ್ನು ರಚಿಸಿದವರು (ಉತ್ಥಾನ ಪರಿಷತ್ ಮಾಲಿಕೆ, 30–40 ಸರಳ ಪುಸ್ತಿಕೆಗಳು), ಸಂಪಾದಕರು ('ಭಾರತೀಯ ಸಾಹಿತ್ಯ', 'ಬೆಂಗಳೂರು ದರ್ಶನ,' ಇತ್ಯಾದಿ ಬೃಹತ್ ಸಂಪುಟಗಳು), ಅಂಕಣಕಾರರು, ಇತ್ಯಾದಿ. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಮಾಸ್ತಿ ಪ್ರಶಸ್ತಿ, ಇತ್ಯಾದಿ ಅನೇಕ ಪ್ರಶಸ್ತಿ–ಪುರಸ್ಕಾರಗಳು ಸಂದಿವೆ; 2007ರಲ್ಲಿ ಉಡುಪಿಯಲ್ಲಿ ನಡೆದ ಅಖಿಲ ಭಾರತ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅವರ ಜೀವನ ಚರಿತ್ರೆಯನ್ನು ಅವರ ಮಿತ್ರರಾದ ನಾ. ದಯಾನಂದ ಬರೆದಿದ್ದಾರೆ ("ಹರವು: ಅನನ್ಯ ವ್ಯಕ್ತಿತ್ವ: ಒಂದು ಜೀವನಕಥೆ," ಚಿಕ್ಕನಾಯಕನ ಹಳ್ಳಿ: ಶೃಂಗಾರ ಪ್ರಕಾಶನ, 2000).

ಅಗಾಧ ಗಾತ್ರ ಹಾಗೂ ವೈವಿಧ್ಯತೆಯುಳ್ಳ ಎಲ್.ಎಸ್.ಎಸ್. ಅವರ ಇಡೀ ವಾಙ್ಮಯವನ್ನು ವ್ಯಾಖ್ಯಾನಿಸುವುದು ಈ ಲೇಖನದಲ್ಲಿ ಅಸಾಧ್ಯ. ಎಲ್.ಎಸ್.ಎಸ್. ಅವರ ಪ್ರಿಯ ಕ್ಷೇತ್ರಗಳೆಂದರೆ ಆದಿಮ ಮಹಾಕಾವ್ಯಗಳು, ನಾಟಕ ಪ್ರಭೇದ, ಮತ್ತು ಶೇಕ್‌ಸ್ಪಿಯರ್. ಈ ಕ್ಷೇತ್ರಗಳಲ್ಲಿ ಅವರು ರಚಿಸಿರುವ ಮೂರು ಕೃತಿಗಳನ್ನು ಸಂಕ್ಷಿಪ್ತವಾಗಿ ಈಗ ನೋಡಬಹುದು.

**ಅ) ಪಾಶ್ಚಾತ್ಯ ಮತ್ತು ಭಾರತೀಯ ಮಹಾಕಾವ್ಯ ಪರಂಪರೆಗಳ ಮನೋಧರ್ಮ (1991):**

1991ರಲ್ಲಿ ಬೆಂಗಳೂರು ವಿ.ವಿ.ಯ ಪ್ರಸಾರಾಂಗದಿಂದ ಪ್ರಕಟವಾದ ಈ ಕಿರು ಹೊತ್ತಿಗೆ ಮೊದಲಿಗೆ 1990ರಲ್ಲಿ ಅದೇ ವಿಶ್ವವಿದ್ಯಾನಿಲಯದಲ್ಲಿ ಎಲ್.ಎಸ್.ಎಸ್. ಮಾಡಿದ ವಿಶೇಷ ಉಪನ್ಯಾಸದ ಲಿಖಿತ–ಪರಿಷ್ಕೃತ ರೂಪ. ಈ ಪುಸ್ತಿಕೆಯು ಪಾಶ್ಚಾತ್ಯ ಮತ್ತು ಭಾರತೀಯ ಆದಿಮ ಮಹಾಕಾವ್ಯಗಳ (ಹೋಮರ್, ವರ್ಜಿಲ್ ಮತ್ತು ಡಾಂಟೆಯ ಮಹಾಕಾವ್ಯಗಳು ಮತ್ತು ವಾಲ್ಮೀಕಿ ರಾಮಾಯಣ ಹಾಗೂ ವ್ಯಾಸ ಭಾರತ) ತೌಲನಿಕ ಅಧ್ಯಯನದ ಮೂಲಕ ಭಾರತೀಯ ಹಾಗೂ ಪಾಶ್ಚಾತ್ಯ ಸಾಹಿತ್ಯ, ಸಮಾಜ, ಮತ್ತು ವಿಶ್ವದೃಷ್ಟಿಗಳನ್ನು ಕುರಿತು ಅನೇಕ ಮಹತ್ವಪೂರ್ಣ ಒಳನೋಟಗಳನ್ನು (ಕನ್ನಡದಲ್ಲಿ) ಮೊದಲ ಬಾರಿಗೆ ನೀಡುತ್ತದೆ.